(ತಾಂತ್ರಿಕ ಶಿಕ್ಷಣ ಇಲಾಖೆ)

ಸಂಖ್ಯೆ:ಬಿಟಿಇ/03/ಇಬಿಎಲ್(4)2018-19

ಕಾರ್ಯದರ್ಶಿಯವರ ಕಚೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:11-12-2018.

## ಸುತ್ತೋಲೆ

**ವಿಷಯ:** ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಬೋಧಕ/ಕಾರ್ಯಗಾರ/ಬೋಧಕೇತರ ಸಿಬ್ಬಂದಿಯವರ ಪ್ರಾಯೋಗಿಕ/ಲಿಖಿತ ಪರೀಕ್ಷೆಯ ಸಂಭಾವನೆ/ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲುಗಳೊಂದಿಗೆ ಲಗತ್ತಿಸಬೇಕಾದ ಪೂರಕ ದಾಖಲೆಗಳು ಹಾಗೂ ಇನ್ನಿತರ ವಿಷಯ ಕುರಿತು.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ತಿಳಿಸುವುದೇನೆಂದರೆ, ಪ್ರಾಯೋಗಿಕ ಪರೀಕ್ಷೆ/ಕೇಂದ್ರಮೌಲ್ಯಮಾಪನ/ಮರುಮೌಲ್ಯಮಾಪನದ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವಾಗ, ತಾವುಗಳು ಒದಗಿಸಬೇಕಾದ ಪೂರಕ ದಾಖಲೆಗಳು ಹಾಗೂ ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾದ ಕ್ರಮದಂತೆ ಒದಗಿಸತಕ್ಕದ್ದು.

1. ಪ್ರಾಯೋಗಿಕ ಪರೀಕ್ಷೆಯ ಸಂಭಾವನೆ ಹಾಗೂ ಪ್ರಯಾಣ ಭತ್ಯೆ, ದಿನಭತ್ಯೆ ಬಿಲ್ಲುಗಳ ಕಾರ್ಯ ನಿರ್ವಹಣೆಗೆ ಪ್ರತ್ಯೇಕ ವಿಷಯ ನಿರ್ವಾಹಕರಿರುವುದರಿಂದ ತಾವುಗಳು ಈ ಎರಡೂ ಬಿಲ್ಲುಗಳನ್ನು ಪ್ರತ್ಯೇಕವಾಗಿಯೇ ಸಲ್ಲಿಸಬೇಕು.
2. ಸಂಭಾವನೆ/ಪ್ರಯಾಣ ಭತ್ಯೆ, ದಿನಭತ್ಯೆ ಬಿಲ್ಲುಗಳನ್ನು ಅಗತ್ಯ ದಾಖಲೆಗಳೊಂದಿಗೆ ಏಕ ಪ್ರತಿಯಲ್ಲಿ ಸಲ್ಲಿಸಿ ಒಂದು ಪ್ರತಿಯನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವುದು.
3. ಬಿಲ್ಲುಗಳನ್ನು ಪಾವತಿಗೆ ಅರ್ಹವಾದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಸಲ್ಲಿಸುವುದು. ಇಲ್ಲವಾದಲ್ಲಿ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 20(ಎ) ಪ್ರಕಾರ ತಿರಸ್ಕೃತಗೊಳ್ಳುವುದು.

**ಸಂಭಾವನೆ/ಪ್ರಯಾಣ ಭತ್ಯೆ / ದಿನಭತ್ಯೆ ಬಿಲ್ಲುಗಳಿಗೆ ಲಗತ್ತಿಸಬೇಕಾದ ಪೂರಕ ದಾಖಲೆಗಳು:**

| | ಪ್ರಾಯೋಗಿಕ ಪರೀಕ್ಷೆ | ಕೇಂದ್ರ ಮೌಲ್ಯಮಾಪನ / ಮರು ಮೌಲ್ಯಮಾಪನ |
|---|---|---|
| ಎ) | ಪ್ರಾಯೋಗಿಕ ಪರೀಕ್ಷಾ ಕೆಲಸಕ್ಕೆ ನಿಯೋಜಿಸಿದ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರ ನೀಡಿದ ಜ್ಞಾಪನ ಪತ್ರ ಲಗತ್ತಿಸಬೇಕು. | ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಲು ನೀಡಿರುವ ನೇಮಕಾತಿ ಆದೇಶದ ಪ್ರತಿ |
| ಬಿ) | ಮೂಲ ಹಾಜರಾತಿ ಪ್ರಮಾಣ ಪತ್ರ | ಮೂಲ ಹಾಜರಾತಿ ಪ್ರಮಾಣ ಪತ್ರ(Form X) |
| ಸಿ) | ದೃಢೀಕೃತ ವೇತನ ಪ್ರಮಾಣ ಪತ್ರ ಸಲ್ಲಿಸುವುದು. ಇಲ್ಲವಾದಲ್ಲಿ ಕನಿಷ್ಟ ಮೂಲವೇತನವೆಂದು ಪರಿಗಣಿಸಲಾಗುವುದು. | ಸಂಭಾವನೆ ಹಾಗೂ ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲುಗಳನ್ನು ಒಟ್ಟಿಗೆ ಸೇರಿಸುವುದು. |
| ಡಿ) | ಮೇಲ್ಕಂಡ ದಾಖಲಾತಿಗಳೊಂದಿಗೆ ಸವಿವರಗಳ ನ್ನೊಳಗೊಂಡ ಬಿಲ್ಲನ್ನು ಪ್ರಾಂಶುಪಾಲರಿಂದ ದೃಢೀಕರಿಸಿ ಸಲ್ಲಿಸುವುದು. | |

.....2.

| | ಪ್ರಾಯೋಗಿಕ ಪರೀಕ್ಷೆ | ಕೇಂದ್ರ ಮೌಲ್ಯಮಾಪನ / ಮರು ಮೌಲ್ಯಮಾಪನ |
|---|---|---|
| ಇ) | ಮುಖ್ಯ ಪರೀಕ್ಷಾ ಅಧೀಕ್ಷಕರಿಂದ ದೃಢೀಕರಿಸಲ್ಪಟ್ಟ ಪ್ರಾಯೋಗಿಕ ಪರೀಕ್ಷೆಯ ಬ್ಯಾಚ್ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿರುವ ಪ್ರಮಾಣ ಪತ್ರ (**Conducting Certificate**)ಹಾಗೂ ಪರೀಕ್ಷಾ ಕೆಲಸಗಳನ್ನು ನಿರ್ವಹಿಸಿದ ವಿವರಣಾ ದೃಢೀಕರಣ ಪತ್ರ. | ಮೌಲ್ಯಮಾಪಕರ ಸರ್ಟಿಫಿಕೇಟ್(Valuer Certificate) Form IX) |
| ಎಫ್) | ಕಚೇರಿ ಸಿಬ್ಬಂದಿಯ ಬಿಲ್ಲಿನಲ್ಲಿ ಸಿಬ್ಬಂದಿಯ ನಿಯೋಜನೆ ನಿಯಮಾನುಸಾರ ಇರುವಂತೆ ನೋಡಿಕೊಳ್ಳುವುದು. ಪರೀಕ್ಷಾ ಕೆಲಸಗಳಿಗೆ ನಿಯೋಜಿಸಿದ ಬಗ್ಗೆ ಅಧಿಕೃತ ಜ್ಞಾಪನ ಪತ್ರವನ್ನು ಬಿಲ್ಲಿನೊಂದಿಗೆ ಲಗತ್ತಿಸುವುದು. | |
| ಜಿ) | ಸಂಭಾವನೆ ಬಿಲ್ಲುಗಳಲ್ಲಿ ಎ.ಐ.ಸಿ.ಟಿ.ಇ. ವೇತನವನ್ನು ಪಡೆಯುತ್ತಿಲ್ಲವೆಂಬುದರ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಮಾಣ ಪತ್ರ. | |
| ಹೆಚ್) | ಮೌಲ್ಯಮಾಪನ, ಮರುಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆ, ಕಚೇರಿ ಸಿಬ್ಬಂದಿ ಸಂಭಾವನೆ, ಕೊಠಡಿ ಮೇಲ್ವಿಚಾರಕರ ಸಂಭಾವನೆ, ಪರೀಕ್ಷಾ ಪೂರ್ವ ಸಿದ್ಧತೆ ಬಿಲ್ಲಿಗೆ (ಪರೀಕ್ಷಾ ಪೂರ್ವ ಸಿದ್ದತೆಯ ಬಿಲ್ಲಿಗೆ ಪ್ರತಿಯೊಬ್ಬ ಉಪನ್ಯಾಸಕರ ಮತ್ತು ಕಾರ್ಯಗಾರ ಸಿಬ್ಬಂದಿಯವರ **Abstract**ನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.) ರೆಸಿಪಿಯಂಟ್ ಐ.ಡಿ., ಬ್ಯಾಂಕ್ ಅಕೌಂಟ್ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ. ಸಂಕೇತವನ್ನು ಬಿಲ್ಲಿನಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ಇಲ್ಲವಾದಲ್ಲಿ ಅಂತಹ ಬಿಲ್ಲುಗಳನ್ನು ತಿರಸ್ಕರಿಸಲಾಗುವುದು. | |

| | | |
|---|---|---|
| ಐ) | ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಖಜಾನಾಧಿಕಾರಿಗಳು, ಆರಕ್ಷಕ ಠಾಣೆ ಸಿಬ್ಬಂದಿಯವರ ಬಿಲ್ಲುಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಹಾಗೂ ಇದರೊಂದಿಗೆ ರೆಸಿಪಿಯಂಟ್ ಐ.ಡಿ., ಬ್ಯಾಂಕ್ ಅಕೌಂಟ್ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ. ಸಂಕೇತವನ್ನು ಬಿಲ್ಲಿನಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು. ಇಲ್ಲವಾದಲ್ಲಿ ಬಿಲ್ಲುಗಳನ್ನು ವಿಲೇ ಮಾಡದೇ ಅಂತಹ ಬಿಲ್ಲುಗಳನ್ನು ತಿರಸ್ಕರಿಸಲಾಗುವುದು. | |

14/12/18

ಲೆಕ್ಕಾಧಿಕಾರಿ (ಪರೀಕ್ಷೆ)
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ ,

ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

1. ಪ್ರಾಚಾರ್ಯರುಗಳು, ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳು.
2. ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಖಜಾನಾಧಿಕಾರಿಗಳು, ಆರಕ್ಷಕ ಠಾಣೆ ಸಿಬ್ಬಂದಿಯವರ ಬಿಲ್ಲುಗಳನ್ನು ಸಲ್ಲಿಸುವಾಗ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಪೂರ್ಣ ಮಾಹಿತಿಯನ್ನು ನೀಡಿ ಅವರ ಮುಖಾಂತರ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.
3. ಅಂಚೆ ವೆಚ್ಚದ ಬಿಲ್ಲುಗಳಿಗೆ ಪಾವತಿಸಲು ಯಾವುದೇ ಸರ್ಕಾರದ ಆದೇಶವಿಲ್ಲದೇ ಇರುವುದರಿಂದ ಕಳುಹಿಸತಕ್ಕದ್ದಲ್ಲ.

ಪ್ರತಿ:

1. ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟ್‌ನಲ್ಲಿ ಪ್ರಚುರಪಡಿಸಲು.
2. Bte links webportal ನಲ್ಲಿ ಪ್ರಚುರಪಡಿಸಲು.

| | |
|---|---|
| EMPLOYEE NAME (CAPITAL LETTERS) | |
| DESIGNATION | |
| BRANCH (Subject wise) | |
| PAN NO. | |
| RECIEPIENT ID | |
| BASIC PAY | |
| BANK ACCOUNT NO. (A/C No. Details in Pass Book Xerox) | |
| IFSC CODE | |
| NAME OF THE BANK | |
| NAME OF THE BANK BRANCH | |
| ACCOUNT TYPE | |
| INSTITUTION NAME | |
| INSTITUTION CODE | |
| PHONE NUMBER | |

Signature of Employee.

| | |
|---|---|
| KGID NO./EMPLOYEE No. | |
| EMPLOYEE NAME (CAPITAL LETTERS) | |
| DESIGNATION | |
| BRANCH (Subject wise) | |
| PAN NO. | |
| RECIEPIENT ID | |
| BASIC PAY | |
| BANK ACCOUNT NO. (A/C No. Details in Pass Book Xerox) | |
| IFSC CODE | |
| NAME OF THE BANK | |
| NAME OF THE BANK BRANCH | |
| ACCOUNT TYPE | |
| INSTITUTION NAME | |
| INSTITUTION CODE | |
| PHONE NUMBER | |

Signature of Employee.